## ಇಲ್ಲಿಯವರೆಗೆ

ನಾಡಿನ ನೋವನ್ನು ಕಾಡಿನಲ್ಲಿ ಮರೆಯಲು ಕಾಯಕನಾಥ ನಿರ್ಧರಿಸುತ್ತಾನೆ. ಆದರೆ, ಮನುಷ್ಯ ಕಾಡಿನಲ್ಲಿ ವಾಸಿಸುವುದು ಸಾಧ್ಯವೇ? ಹಾಗೆ ವಾಸಿಸುವುದು ಪರಿಸರದಲ್ಲಿ ಹಸ್ತಕ್ಷೇಪ ಅನ್ನಿಸುವುದಿಲ್ಲವೇ? ಕಾಯಕನಾಥನನ್ನು ಊರಿಗೆ ಬರುವಂತೆ ಮನವೊಲಿಸಲು ಆತನ ಬಳಿಗೆ ಜಂಪಯ್ಯ ಎನ್ನುವ ವ್ಯಕ್ತಿಯನ್ನು ಫಾರೆಸ್ಟ್ ಆಫೀಸರ್ ಕರೆತರುತ್ತಾರೆ. ಜಂಪಯ್ಯನಿಗೆ ಕಾಯಕನಾಥನ ಮನವೊಲಿಸುವುದು ಸಾಧ್ಯವಾಯಿತೆ? ಅಥವಾ ಜಂಪಯ್ಯನೇ ಕಾಯಕನಾಥನ ಪ್ರಭಾವಕ್ಕೆ ಒಳಗಾದನೆ?



ಬೆನ್ನು ನೀವಿದರು. ಚೀಲದಿಂದ ಮುಲಾಮು ತೆಗೆದು ಹಚ್ಚಿದರು.

'ನಿಮ್ಮ ಮಾತು ಕೇಳಿ ಇಲ್ಲಿಗೆ ಬರಬಾರದಿತ್ತು ಅನ್ಸುತ್ತೆ. ಸೇತುವೆ ತನಕ ಹೋಗಿದ್ವಿ ಮೇಲೆ ಹತ್ತಿದ್ರೆ ಯಾವ್ದಾದ್ರೂ ಗಾಡಿ ಬಂದು, ಆಸ್ಪತ್ರೆನಾದರೂ ಸೇರ್ತಿದ್ದೆ... ಈ ಹುಚ್ಚ, ಕಾಡು ಬಿಟ್ಟು ಬರಲ್ಲ ಅಂತ ಪುನಃ ಇಲ್ಲಿಗೇ ಕರೆತಂದ...' ಜಂಪಯ್ಯ ನೋವಿನ ತೀವ್ರತೆಯಲ್ಲಿ ಸಹಿಸಲಾರದೇ ಒದರಾಡುತ್ತಿದ್ದ. ಯೋಗೀಶರು ಅವನ ಮಾತಿಗೆ ಕಿವಿಗೊಡದೆ ತಮಗೆ ತೋಚಿದ ಶುಶ್ರೂಷೆ ನೀಡಿದರು.

ಕಾಯಕನಾಥ ಬರಿದೇ ನೋಡುತ್ತಾ ಕುಳಿತಿದ್ದ. ಕತ್ತಲು ನಿಧಾನಕ್ಕೆ ಆವರಿಸತೊಡಗಿತ್ತು.

* * *

ಯೋಗೀಶರಿಗೆ ಅಲ್ಲಿ ನಿಲ್ಲುವಂತಿರಲಿಲ್ಲ. ಕರ್ತವ್ಯದ ಕರೆ, ಮನೆಯ ಜವಾಬ್ದಾರಿ ಅವರನ್ನು ಅಲ್ಲಿಂದ ತೆರಳುವಂತೆ ಮಾಡಿತ್ತು. ಬರುವಾಗ ತಂದ ಆಹಾರ ಇವರಿಗೆ ಕೊಟ್ಟು ಹೋಗುತ್ತಿದ್ದರು. ಅವರ ಆತ್ಮೀಯತೆ, ಬಾಂಧವ್ಯ ಕಾಯಕನಾಥನ ನಿಗ್ರಹ ಕರಗಿಸಿ, ಅವರ ಮಾತುಗಳಿಗೆ ಸೋತು ಅನುಮೋದಿಸುವಂತೆ ಮಾಡಿತ್ತು. ಅವನು ತನ್ನ ಸಂಗಾತಿಯನ್ನು, ಮಗನನ್ನು ಕಳೆದುಕೊಂಡಾಗ, ಮಾನಸಿಕವಾಗಿ ಒಂಟಿಯಾಗಿದ್ದ. ಸಾಂತ್ವನ, ಅನುಕಂಪ, ಬೇಕಿದ್ದ ಸಂದರ್ಭದಲ್ಲಿ ಅವನಿಗೆ ಬೇಕಾದ ಒತ್ತಾಸೆ ಸಿಗದಾಗ ಸಹಜವಾಗಿಯೇ ವಿರಕ್ತಿ ಹುಟ್ಟಿ ಈ ಅಜ್ಜರಕಾಡಿಗೆ ಬಂದಿದ್ದ. ಆದರೆ ಈ ಕೆಲವೇ ಗಂಟೆಗಳ ಜಂಪಯ್ಯನ ಒಡನಾಟ, ಯೋಗೀಶರ ವಿಶ್ವಾಸ ಅವನ ಏಕಾಂತವನ್ನು ಚದುರಿಸಿ ಮತ್ತೆ ಅವನನ್ನು ಸಹಜ ಸ್ಥಿತಿಗೆ ತರಿಸಿತ್ತು.

ಜಂಪಯ್ಯ ಮಲಗಿದಲ್ಲಿಂದಲೇ ತನ್ನ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದ.

'ಒಂದ್ಸಲ ಏನಾಯ್ತು ಗೊತ್ತಾ? ನಾನು ಹೀಗೆ ಒಬ್ಬರ ಮನೆಯಲ್ಲಿ ಒಂದು ವಯಸ್ಸಾದವರನ್ನು ನೋಡಿಕೊಳ್ಳಲು ಇದ್ದೆ. ಆಗ ಆ ಮನೇಲಿ ಅವ್ರಿಗೆ ಮದ್ವೆ ವಯಸ್ಸು ಮೀರಿದ ಒಬ್ಬ ಮಗಳಿದ್ದಳು. ನನ್ನ ಆ ಹುಡ್ಗೀನ್ನ ಮದ್ವೆ ಆಗ್ತೀಯಾ ಅಂತ ಕೇಳಿದರು. ಆಗಿದ್ರೆ ಹುಡ್ಗೀನೂ ಮಾವನೂ ಆಸ್ತೀನೂ ಫ್ರೀ ಸಿಕ್ತಿತ್ತು ಮಾರ್ರೆ ಆದರೆ'

ಕಾಯಕನಾಥ ಅವನ ಮಾತುಗಳಿಗೆ ಕುತೂಹಲದಿಂದ ಕಾಯುತ್ತಿದ್ದಂತೆ ನೋಡಿದ.

'ನೋಡಲು ಲಕ್ಷಣವಾಗಿದ್ದಳು ಅವಳಿಗೂ ನನ್ನ ಮೇಲೆ ಮನಸ್ಸಿತ್ತೋ ಏನೋ ಹೋಗುವಾಗ ಬರುವಾಗ ನನ್ನ ನೋಡಿ ನಗೋದು ಮಾರ್ರೇ. ಆದರೆ ಹುಡ್ಗೀಗೆ ಬಾಯಿ ಬರೋದಿಲ್ಲಾ ಅಂತ ಗೊತ್ತಾಯ್ತು. ನಾನು ಬೇಡಾ ಅಂದು ಬಿಟ್ಟೆ. ಆಗಿದ್ರೆ ನನ್ನ ಕತೆ ಬೇರೆನೇ ಇರ್ತಿತ್ತು' ನಿಟ್ಟುಸಿರು ದಬ್ಬಿದ ಜಂಪಯ್ಯ.

'ನನ್ನ ಹಣೆಬರಹದಲ್ಲಿ ಈ ಥರ ಕಾಡಲ್ಲಿ ಇದ್ದು ಮರದಿಂದ ಬೀಳೋ ಯೋಗ ಇತ್ತೂಂತ ಕಾಣ್ಸುತ್ತೆ. ಅದಕ್ಕೆ ಆ ಮದ್ವೆ ಆಗಲು ದೇವ್ರು ಮನಸ್ಸು ಕೊಡಲಿಲ್ಲ.'

ಕಾಯಕನಾಥನಿಗೆ ಅವನ ಮಾತಿಗೆ ನಗು ಬಂದಿತು. 'ಆಗಬಹುದಿತ್ತಲ್ಲಾ ಅವ್ರಿಗೂ ಒಂದು ಬಾಳು ಸಿಕ್ತಿತ್ತು. ಅವ್ಳ ಪರ ಮಾತೂ ನೀನೇ ಆಡ್ತಿದ್ದೆ ಹೇಗಿದ್ದರೂ.'

ಜಂಪಯ್ಯ ತಲೆ ಕೊಡವಿದ, 'ಅದು ಹಾಗಲ್ಲ. ಮಾತು ಇಲ್ದೇ ಹೋದರೆ ಮನುಷ್ಯ ತನ್ನ ಅಂತರಂಗವನ್ನು ಪರಿಪೂರ್ಣವಾಗಿ ಹೇಗೆ ಹೊರಗೆ ತೋಡಿಕೊಳ್ಳುತ್ತಾನೆ ಹೇಳು? ನನ್ನ ಮಾತಿಗೆ ತಕ್ಕ ಪ್ರತಿಸ್ಪಂದನೆ ಸಿಗದೇ ಹೋದರೆ ಹೇಗೆ ಜೊತೆಗೆ ಬಾಳ್ವೆ ಮಾಡೋದು? ಮನುಷ್ಯನಿಗೆ ಮಾತನಾಡುವ ಶಕ್ತಿ ಕೊಟ್ಟಿರುವುದು ಅವನಿಗೆ ದೊಡ್ಡ ವರ! ತನ್ನ ಭಾವನೆಗಳನ್ನು ಅದರ ಮೂಲಕ ಸಮರ್ಥವಾಗಿ ಆತ ಅಭಿವ್ಯಕ್ತಿಸಬಲ್ಲ. ಕಾಯ ನಿಜ ಹೇಳು ನೀನೇಕೆ ಕಾಡಿಗೆ ಬಂದೆ. ನಿನ್ನೊಳಗೆ ನಿನ್ನ ದುಃಖದ ಗೋರಿ ಇತ್ತು. ಅದರೊಳಗೆ ನೀನು ಪೂರ್ತಿಯಾಗಿ ಹುದುಗಿಹೋಗಿದ್ದೆ. ನಿನ್ನ ದುಃಖದ ಕೂಪದಿಂದ ಹೊರಗೆ ಬರಲು ನೀನು ಮಾತನಾಡಬೇಕಿತ್ತು. ನಿನ್ನ ನೋವು ತೋಡಿಕೊಳ್ಳಬೇಕಿತ್ತು. ನಿನ್ನ ನೋವಿಗೆ ಹೆಗಲು ಕೊಡುವವರು, ಕಣ್ಣೀರು ಒರೆಸಿ ಸಮಾಧಾನ ಹೇಳುವವರಿಲ್ಲದೇ ಆ ದುಃಖದ ಭಾರವನ್ನು ನೀನೂ ಹೊರಲಾರದೇ ಅಲ್ಲಿಂದ ಓಡಿದೆ. ನಾವು ಎಷ್ಟೇ ನಮ್ಮ ಭಾವನೆಗಳನ್ನು ನಿಯಂತ್ರಿಸಿಕೊಂಡರೂ ಅದುಮಿಟ್ಟರೂ ಅದು ಮತ್ತೊಂದು ರೀತಿಯಲ್ಲಿ ಆಚೆ ಬರಲೇಬೇಕು. ನೀನು ಇಲ್ಲಿ ಅಲೆದಾಡಿ ನಿನ್ನ ಕುದಿವ ಮನಸ್ಸಿಗೆ ತಂಪೆರಚಿಕೊಂಡೆ. ಈಗ ನನ್ನ ಜೊತೆ ಮಾತನಾಡಿ ಮನಸ್ಸು ನಿನ್ನದು ಹಗುರವಾಗುತ್ತಿದೆ. ಹಳೇ ಕಾಯಕನಾಥನಾಗಿ ಮತ್ತೆ ಮರಳುತ್ತಿದ್ದೀಯಾ... ಹೌದಲ್ಲವೇ...?'

ಕಾಯಕನಾಥ ಅವನ ಮಾತನ್ನು ಅಂಗೀಕರಿಸಲೂ ಇಲ್ಲ, ನಿರಾಕರಿಸಲೂ ಇಲ್ಲ. ಹಾಗೇ ಮುಗುಮ್ಮಾಗಿ ಕುಳಿತೇ ಇದ್ದ.

'ಹಾಗೆ ನೋಡಲು ಹೋದರೆ ಮನಸ್ಸು ಅನ್ನೋದು ಈ ಕಾಡಿನಂತೆಯೇ ಇಲ್ಲಿ ದಟ್ಟ ಮರಗಳಿದ್ದಂತೆ ಅಲ್ಲಿ ಭಾವನೆಗಳಿವೆ. ಕಾಡು ಪ್ರಾಣಿಗಳು, ಮುಳ್ಳು ಪೊದೆಗಳಿರುವಂತೆ ಅಲ್ಲಿ ವಿಕಾರಗಳಿವೆ. ಹಸಿರು, ಸಿಹಿ ಹಣ್ಣುಗಳಿರುವಂತೆ ಮೃದುತ್ವವೂ ಇದೆ. ಮುಂಚೆಯೆಲ್ಲಾ ಕಾಡು ಅಧ್ಯಾತ್ಮದ ಕೇಂದ್ರವಾಗಿತ್ತಂತೆ. ಹಾಗೇ ಮನಸ್ಸು ಕೂಡ ನಮ್ಮ ಒಳಿತು ಕೆಡುಕಿನ ಕೇಂದ್ರವಲ್ಲವೇ? ಆದರೆ ಯಾವುದರ ಮೇಲೆ ಹೆಚ್ಚು ಒತ್ತು ಕೊಡುತ್ತೇವೋ ಮನುಷ್ಯ ಅದೇ ಆಗುತ್ತಾನೆ. ಆಸೆಯ ಕೈಗೆ ಕೊಟ್ಟರೆ ಅವನು ಸ್ವಾರ್ಥಿ. ಭಕ್ತಿ, ವೈರಾಗ್ಯದ ಕೈಗೆ ಕೊಟ್ಟರೆ ಯೋಗಿ. ದುಶ್ಚಟಗಳ ಕೈಗೆ ಕೊಟ್ಟರೆ ದುರಾಚಾರಿ...!'

ತನ್ನ ಮಾತನ್ನೇ ಮಥಿಸುತ್ತಾ ಜಂಪಯ್ಯ ನುಡಿದ, 'ಈ ಕಾಡು, ಈ ಏಕಾಂತ ನಮ್ಮೊಳಗಿನ ಎಷ್ಟೋ ವಿಚಾರಗಳನ್ನು ಮಥಿಸುತ್ತದೆ ಅಲ್ಲವೇ? ನಮ್ಮನ್ನು ನಾವು ಮೌಲ್ಯಮಾಪನ ಮಾಡಿಕೊಳ್ಳಲೋ ಆತ್ಮಾವಲೋಕನ ಮಾಡಿಕೊಳ್ಳಲು ಇದೊಂದು ದಾರಿ. ಅದಕ್ಕೇ ಇರಬೇಕು ಮುಂಚೆ ರಾಜಮಹಾರಾಜರು ತಮ್ಮ ಅಂತಿಮ ದಿನಗಳನ್ನು ವಾನಪ್ರಸ್ಥ ಎಂದು ಎಲ್ಲವನ್ನೂ ತ್ಯಜಿಸಿ ಮೋಕ್ಷವೆಂದು ಕಾಡಿನ ಹಾದಿ ಹಿಡಿಯುತ್ತಿದ್ದದ್ದು...'

ಕಾಯಕನಾಥ ಜಂಪಯ್ಯನನ್ನು ದುರುಗುಟ್ಟಿ ನೋಡಿದ, 'ನಾನೂ ಹಾಗೇ ಬಂದಿದ್ದೆ. ಆದರೆ ನೀನು ನನ್ನ ಸಂಕಲ್ಪವನ್ನು ಅಲುಗಾಡಿಸುತ್ತಿದ್ದೀಯಾ ಅಷ್ಟೇ...'

'ವಾನಪ್ರಸ್ಥಕ್ಕೆ ಬರಲು ನಿನಗೇನು ಅಂಥ ವಯಸ್ಸಾಗಿರುವುದು? ಕಳೆದುಹೋಗಿದ್ದು ಹೋಯಿತು ಮತ್ತೆಂದೂ ಮರಳಿ ಬರುವುದಿಲ್ಲ. ಅದಕ್ಕಾಗಿ ಚಿಂತಿಸಿ, ಮನಸ್ಸು, ದೇಹ ದಂಡಿಸಿಕೊಳ್ಳುವುದರಲ್ಲಿ ಏನೂ ಅರ್ಥವಿಲ್ಲ. ಬಾ... ನನ್ನ ಜೊತೆ ಇಲ್ಲಿಂದ ಹೋಗೋಣ. ಬೇಕಾದರೆ ನನ್ನೊತೆ ಕಾರಗದ್ದೆಗೆ ಬಾ ಅಲ್ಲೇ ಉಳಿದುಕೋ...'

'ಇಲ್ಲ... ನಾನೆಲ್ಲಿಗೂ ಬರುವುದಿಲ್ಲ. ನಾನು ಬದುಕಿದರೂ ಸತ್ತರೂ ಇಲ್ಲೇ...' ಕಾಯಕನಾಥ ಎದ್ದು ಕಾಡಿನ ಅಭಿಮುಖವಾಗಿ ಓಡತೊಡಗಿದ. ಆದರೆ ಮಲಗಿದಲ್ಲೇ ಇದ್ದ ಜಂಪಯ್ಯನಿಗೆ ಬೆನ್ನಿನ ಏಟಿನ ಕಾರಣ ಏಳಲಾಗಲಿಲ್ಲ. ಅವನಿದ್ದ ಸ್ಥಿತಿಯಲ್ಲೇ ಕೂಗಿದ...

'ಕಾಯ ನಿಲ್ಲು ನನ್ನ ಬಿಟ್ಟು ಹೋಗಬೇಡ...' ಅವನ ಮಾತುಗಳು ಆಲಿಸದವನಂತೆ ಕಾಯಕನಾಥ ಓಡತೊಡಗಿದ. ಜಂಪಯ್ಯನ ಮಾತುಗಳು ಅವನ ಮನಸ್ಸಿನ ಮುಚ್ಚಿದ ಬಾಗಿಲು ತೆರೆಸಿತ್ತು. ಮಂದವಾಗಿ ಹರಿಯುತ್ತಿದ್ದ ಕುಮುದಿನಿಯ ತೀರಕ್ಕೆ ಬಂದಾಗ ಅವನ ಆವೇಗಕ್ಕೊಂದು ತಡೆ ಬಿತ್ತು. ನೀರಿಗೆ ಧುಮುಕಿದವನೇ ಮೊದಲ ಬಾರಿಗೆ ಈಜುತ್ತಿದ್ದವನಂತೆ ಕೈಕಾಲು ಬಡಿದು ಈಜತೊಡಗಿದ. ಅವನ ಮನದ ತುಮುಲವನ್ನು ಹತ್ತಿಕ್ಕಲು ಕುಮುದಿನಿಯ ಶೀತಲತೆ ಸ್ಪರ್ಧೆಗಿಳಿದಂತಿತ್ತು. ಕಡೆಗೂ ಕುಮುದಿನಿಯೇ